ಇರೋಂಗೆ ಅನಿಸ್ತಿತ್ತು' ಎಂದು ಭಾಸ್ಕರ ಪಿಳಿಪಿಳಿ ಕಣ್ಣು ಮಿಟುಕಿಸುತ್ತ ನುಡಿದ. ಶಂಕರ ಕುತೂಹಲದಲ್ಲಿ ಭಾಸ್ಕರನ ಕಡೆಗೇ ನೋಡಿದ. ನಂತರ 'ಲೇ ಭಾಸ್ಕರ, ನೆನ್ನೆ ಸಂಜೆ ಒಂದು ಪದ್ಯ ಹೇಳಿದ್ನಲ್ಲ... ಅದ್ರದ್ದು ಇನ್ನೂ ನಾಲ್ಕು ಸಾಲು ಹೊಳೀತು. ಹೇಳ್ತೀನಿ ಕೇಳು...'

**'ಚಿಣ್ಣಿದಾಂಡು ಮರಕೋತಿ ಕೇಳೇ ಇಲ್ಲ ಇವನು**
**ಮೊಬೈಲು ಪರದೆ ಒಳಗೆ ತೂರುತಾನೆ ದಿನವೂ**
**ನಿದ್ದೆಗನಸು ಬೆಟ್ಟ ಹತ್ತಿ ದೇಶ ನೋಡುತಾನೆ**
**ದಿನವು ಎದ್ದು ಮುದ್ದೆ ಬೇಡವೆಂದು ಹಠವ**
**ಹಿಡಿಯುತಾನೆ...'**

'ಹೆಂಗಿದೆ ಭಾಸ್ಕರ? ಚಂದವಿದೆ ಅಲ್ವ!' ಶಂಕರ ಹುಬ್ಬು ಹಾರಿಸಿದ.

'ಹೋಗಣ್ಣ ನೀನು... ಯಾವಾಗ್ಲು ನನ್ ಮೇಲೇ ಪದ್ಯ ಬರೀತೀಯ. ಬೇರೆ ಬರಲ್ವ ನಿಂಗೆ' ಎಂದು ನುಡಿದು ಸ್ವಲ್ಪ ಹೊತ್ತು ನಿಂತಿದ್ದ. ನಂತರ 'ಇರು, ಅಪ್ಪನ ಮೊಬೈಲಲ್ಲಿ ಮೈಂಡ್‌ಕ್ರಾಫ್ಟ್ ಆಡ್ಬೇಕು. ಅಪ್ಪ ಕೆಲಸಕ್ಕೆ ಹೋದ್ರೆ ಮತ್ತೆ ಸಿಗೋದು ರಾತ್ರೀಗೆ...' ಎನ್ನುತ್ತಾ ಮನೆಗೆ ನಡೆದ. ಅಲ್ಲಿ ಮೇಜಿನ ಮೇಲಿದ್ದ ತಂದೆಯ ಮೊಬೈಲು ತೆಗೆದುಕೊಂಡು ಆಟ ಆಡತೊಡಗಿದ.

'ಯಾವಾಗ ನೋಡಿದ್ರು ಮೊಬೈಲಲ್ಲಿ ಗೇಮ್ ಆಡೋದೆ ಆಯ್ತು. ಬೇರೆ ಏನಾದ್ರು ಮಾಡು ಉದ್ಧಾರ ಆಗ್ತಿ' ಅಡುಗೆ ಮನೆಯಿಂದ ಅಮ್ಮನ ಬೈಗುಳ.

ಭಾಸ್ಕರ 'ಮ್ಕೋ... ನಾ ಮೊಬೈಲು ತಗೊಂಡಿದ್ದೆ ಈಗ. ಈ ದೊಡ್ಡೋರೆಲ್ಲಾ ಬರೀ ಸುಳ್ಳೆ ಹೇಳ್ತಾರೆ' ಎಂದುಕೊಂಡು ಆಚೆ ನಡೆದ. ಅಲ್ಲಿ ಬಿಸಿಲು ಬೀಳದ ಕಡೆ ಗೋಡೆಗೊರಗಿ ಕುಳಿತು ಮೊಬೈಲಿನಲ್ಲಿ ಆಡತೊಡಗಿದ.

ಮೇಲೆ ಆಕಾಶದ ಒಂಟಿ ಮೋಡ, ಪಕ್ಕದಲ್ಲೇ ಸಾಗುತ್ತಿರುವ ಇರುವೆ ಸಾಲು, ಊರೊಳಗಿನ ಗಲಾಟೆಯ ಸದ್ದು, ನಾಯಿ ಬೊಗಳಿದ್ದು, ಹಸು ಅಂಬಾ ಅಂದಿದ್ದು, ಅಪರೂಪವಾಗಿರುವ ಗುಬ್ಬಿ ತನ್ನ ತಲೆಯ ಮೇಲೆಯೇ ಹಾರಿದ್ದು, ತಂದೆ ಮನೆಯ ಗೇಟು ತೆಗೆದು ಆಚೆ ಹೋದದ್ದು... ಎಲ್ಲಕ್ಕೂ ಕಿವುಡಾಗಿದ್ದ. ಕುರುಡಾಗಿದ್ದ.

ಮನೆಯ ಮೇಲಿರುವ ಕೋತಿಮರಿಯೊಂದು ಗೋಡೆಯ ಅಂಚಿನಿಂದ ಭಾಸ್ಕರನ ಕೈಯಲ್ಲಿರುವ ಮೊಬೈಲಿನ ಕಡೆಗೇ ಕುತೂಹಲದಲ್ಲಿ ನೋಡತೊಡಗಿತು. ಅದರಲ್ಲಿ ಬದಲಾಗುತ್ತಿರುವ ಚಿತ್ರಗಳು, ಬಣ್ಣಗಳು,



ಸದ್ದು... ಎಲ್ಲವೂ ಅದರ ಗಮನವನ್ನು ಸೆಳೆದ ಹಾಗಿತ್ತು. ಪಿಳಿಪಿಳಿ ಕಣ್ಣು ಬಡಿಯುತ್ತಲೆ ಕಿಟಕಿಯ ಸರಳು ಹಿಡಿದು ಕೆಳಗೆ ಹಾರಿ ಭಾಸ್ಕರನ ಕೈಯಲ್ಲಿರುವ ಮೊಬೈಲನ್ನು ಕಸಿದುಕೊಂಡು ಮತ್ತೆ ಮನೆಯ ಮೇಲೆ ಕೂತಿತು. ಭಾಸ್ಕರ ಜೋರಾಗಿ ಕಿರುಚಿದ. ಅವನು ಕಿರುಚಿದ ಸದ್ದಿಗೆ ಆತಂಕಗೊಂಡ ಅವನ ತಾಯಿ ಆಚೆ ಬಂದು 'ಅಯ್ಯೋ ಹಾಳಾದೋನೆ. ಆ ಮೊಬೈಲ್‌ನ ತಗೊಂಡೋಗಿ ಕೋತಿ ಕೈಗೆ ಕೊಟ್ಟ. ಅದಕೇನಾರ ಹೆಚ್ಚುಕಮ್ಮಿ ಆದ್ರೆ ಅಷ್ಟೆ. ನಿಮ್ಮಪ್ಪ ಸಾಯ್ಸಿ ಬಿಡ್ತಾನೆ' ಎಂದು ಹೆದರಿಸಿದಳು. ಅಷ್ಟರಲ್ಲಿ ಭಾಸ್ಕರನೂ ಅಲ್ಲಿಗೆ ಬಂದ.

ಕೋತಿ ಮೊಬೈಲಿನ ಪರದೆಯನ್ನು ಕುತೂಹಲದಲ್ಲಿ ನೋಡಿತು. ಮತ್ತೆ ಕೈಯಾಡಿಸಿತು. ಪರದೆಯ ಮೇಲೆ ಏನೋ ಚಲಿಸಿದಂತಾಗಿ ಗಲಬಿಲಿಗೊಂಡಿತು. ನಂತರ ಅದನ್ನು ಮೂಸಿನೋಡಿತು. ತುದಿಯನ್ನು ಬಾಯೊಳಗೆ ಇಟ್ಟುಕೊಂಡು ಕಚ್ಚಿತು. ಮೂವರೂ ಅದರ ಕಡೆಗೇ